<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಾಂಗ ದಂಡಾಧಿಕಾರಿಗಳವರ ನ್ಯಾಯಾಲಯ, ಮುಳಬಾಗಿಲು</u>

<u>ಸಿಸಿ ಸಂಖ್ಯೆ.**4541/2023**</u>

| | | |
|---|---|---|
| <u>ಫಿರ್ಯಾದುದಾರರು</u> | ಃ | ರಾಜ್ಯದ ಪರವಾಗಿ<br>ನಗರ ಠಾಣಾ ಆರಕ್ಷಕರು, ಮುಳಬಾಗಿಲು. |

-ವಿರುದ್ಧ-

| | | |
|---|---|---|
| <u>ಆರೋಪಿಗಳು</u> | ಃ | **1.** ಶ್ರೀನಿವಾಸ್.ವಿ.**, 27** ವರ್ಷ,<br>ಬಿನ್ಃ ವೆಂಕಟರವಣಪ್ಪ,<br><br>**2.** ವೆಂಕಟಲಕ್ಷ್ಮಮ್ಮ**, 55** ವರ್ಷ,<br>ಕೋಂಃ ವೆಂಕಟರವಣಪ್ಪ,<br><br>**3.** ವೆಂಕಟರವಣಪ್ಪ**, 58** ವರ್ಷ,<br>ಬಿನ್ಃ ವೆಂಕಟಪ್ಪ,<br><br>ಆ**-1** ರಿಂದ **3** ರವರ ವಾಸಃ<br>ಎ.ಡಿ.ಕಾಲೋನಿ, ಮುಳಬಾಗಿಲು ನಗರ. |

# <u>ದೋಷಾರೋಪಣೆ</u>

ಮುಳಬಾಗಿಲಿನ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳಾದ ಶ್ರೀ ಹರೀಶ್ ಜಿ**.,** ಎಂ.ಬಿ.ಎ. ಎಲ್.ಎಲ್.ಬಿ. ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿಗಳಾದ ನಿಮ್ಮಗಳ ವಿರುದ್ಧ ಕೆಳಕಂಡ ದೋಷಾರೋಪಣೆ ಹೊರಿಸುತ್ತೇನೆ.

ದಿನಾಂಕಃ22.02.2021 ರಂದು ಮುಳಬಾಗಿಲು ನಗರ ಆರಕ್ಷಕ ಠಾಣೆಯ ವ್ಯಾಪ್ತಿಗೆ ಸೇರಿದ ಮುಳಬಾಗಿಲು ನಗರದ ಎ.ಡಿ.ಕಾಲೋನಿಯಲ್ಲಿ ವಾಸವಿರುವ 1 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಮುಳಬಾಗಿಲು ನಗರದಲ್ಲಿನ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿದ್ದು, ಮದುವೆಯ ಕಾಲದಲ್ಲಿ ಚಾಸಾ-1 ರವರ ತಂದೆ-ತಾಯಿಯವರು,

1 ನೇ ಆರೋಪಿಯಾದ ನಿಮಗೆ ರೂ.4,00,000/- ರೂಗಳನ್ನು ನಗದಾಗಿ ಹಾಗೂ ಒಂದು ಚಿನ್ನದ ಉಂಗುರ ಮತ್ತು ಒಂದು ಚಿನ್ನದ ಚೈನ್ ಅನ್ನು ವರದಕ್ಷಿಣೆಯಾಗಿ ನೀಡಿದ್ದು, ಮದುವೆಯಾದ ನಂತರ ಒಂದು ತಿಂಗಳ ಕಾಲ ಅನ್ಯೋನ್ಯವಾಗಿದ್ದು, ನಂತರಲ್ಲಿ 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ತವರು ಮನೆಯಿಂದ ಇನ್ನೂ ಹೆಚ್ಚಿನ ವರದಕ್ಷಿಣೆಯಾಗಿ ಹಣ ತರುವಂತೆ ಪೀಡಿಸಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿದಲ್ಲದೇ, ತವರುಮನೆಯಿಂದ ಇನ್ನೂ 5 ಲಕ್ಷ ರೂ. ಗಳ ವರದಕ್ಷಿಣೆ ತೆಗೆದುಕೊಂಡು ಬಾ ಇಲ್ಲದಿದ್ದರೆ ನಿನಗೂ ನನಗೂ ಯಾವುದೇ ಸಂಬಂಧವಿಲ್ಲ, ನಾನು ಬೇರೆ ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿ, ಕಿರುಕುಳಕೊಟ್ಟಿರುತ್ತೀರಿ, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ-**498(ಎ)** ಸಹವಾಚಕ ಕಲಂ-34 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂ,

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಸಾಂಸಾರಿಕವಾಗಿ ಹಾಗೂ ವರದಕ್ಷಿಣೆಯ ವಿಚಾರವಾಗಿ ಚಾಸಾ-1 ರವರಿಗೆ ಹಿಂಸೆ ಕೊಟ್ಟು, ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ.ಕಲಂ-**504** ಸಹವಾಚಕ ಕಲಂ-34 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂ,

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಸಾಂಸಾರಿಕವಾಗಿ ಹಾಗೂ ವರದಕ್ಷಿಣೆಯ ವಿಚಾರವಾಗಿ ಚಾಸಾ-1 ರವರಿಗೆ ಹಿಂಸೆ ಕೊಟ್ಟು, ವರದಕ್ಷಿಣೆ ಹಣ ತಂದರೆ ಮಾತ್ರ ಮನೆಗೆ ಬಾ ಇಲ್ಲ ಅಂದರೆ ನೀನು ಬರೀಗೈಲಿ ಬಂದರೆ ನಿನ್ನನ್ನು ಪೆಟ್ರೋಲ್ ಹಾಕಿ ಸುಟ್ಟು ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿಗಳಾದ ಭಾ.ದಂ.ಸಂ.ಕಲಂ-**506** ಸಹವಾಚಕ ಕಲಂ-34 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂ,

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರ ಪೈಕಿ 1 ನೇ ಆರೋಪಿಯಾದ ಚಾಸಾ-1 ರವರ ತವರು ಮನೆಯವರಿಂದ ವರದಕ್ಷಿಣೆಯಾಗಿ ಹಣವನ್ನು ಪಡೆದುಕೊಂಡಿರುತ್ತೀರಿ, ಆ ಮೂಲಕ ಆರೋಪಿಗಳಾದ ನೀವುಗಳು ವರದಕ್ಷಿಣೆ ನಿಷೇಧ ಕಾಯ್ದೆ ಕಲಂ-**3** ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂ,

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಚಾಸಾ-1 ರವರ ತವರು ಮನೆಯವರು ವರದಕ್ಷಿಣೆಯನ್ನು ನೀಡಿದ್ದರೂ ಸಹ, ಇನ್ನೂ ಹೆಚ್ಚಿನ ವರದಕ್ಷಿಣೆ ತರುವಂತೆ ಚಾಸಾ-1 ರವರಿಗೆ ಒತ್ತಾಯಿಸಿ, ಆಕೆಗೆ ಕಿರುಕುಳ ನೀಡಿರುತ್ತೀರಿ, ಆ ಮೂಲಕ ಆರೋಪಿಗಳಾದ ನೀವುಗಳು ವರದಕ್ಷಿಣೆ ನಿಷೇಧ ಕಾಯ್ದೆ ಕಲಂ-**4** ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂ,

ನಿಮ್ಮಗಳ ಮೇಲೆ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕಃ **29** ನೇ ಸೆಪ್ಟೆಂಬರ್ **2025.**

(ಹರೀಶ್ ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಮುಳಬಾಗಿಲು.